ಆ) ಗ್ರಾಮ ವಿದ್ಯುತ್ ಪ್ರತಿನಿಧಿ ಯೋಜನೆಯನ್ನು ರಾಜ್ಯದ ಎಲ್ಲಾ ವಿದ್ಯುತ್ ಕಂಪನಿಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ ಮತ್ತು ಈ ಯೋಜನೆಯ ಕಾರ್ಯಕ್ಷಮತೆಯನ್ನು ಪರಾಮರ್ಶಿಸಲಾಗುತ್ತಿದೆ. ಈ ಯೋಜನೆಯ ಯಶಸ್ಸನ್ನು ಮನಗಂಡ ನಂತರ ಮುಂದೆ ರಾಜ್ಯದ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

....

130 (314) : ಶ್ರೀ ನಾರಾಯಣ ಸ್ವಾಮಿ (ಆನೇಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯಡಿ ಯಾವ ಯಾವ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗುತ್ತಿತ್ತು ಹಾಗೂ ಒದಗಿಸುತ್ತಿದ್ದ ಹಣ ಎಷ್ಟು? ಜಿಲ್ಲಾವಾರು ವಿವರ ನೀಡುವುದು;

ಆ) ಈಗಾಗಲೇ ಈ ಯೋಜನೆಯಡಿ ಪ್ರಸ್ತಾವಿತಗೊಂಡಿದ್ದ ಕಾಮಗಾರಿಗಳೆಷ್ಟು ಮತ್ತು ಮಂಜೂರಾದವೆಷ್ಟು?

ಇ) ಸದರಿ ಪ್ರಸ್ತಾವನೆಗಳಿಗೆ ಬದಲಾವಣೆ ಮಾಡಲಾಗಿದೆಯೇ?

ಈ) ಹಾಗಿದ್ದಲ್ಲಿ ಕಾರಣವೇನು?

ಉ) ಈಗ ನಬಾರ್ಡ್ ರಸ್ತೆ–ಸೇತುವೆಗಳಿಗೆ ಹಣ ನೀಡದಿರಲು ನಿರ್ಧರಿಸಿದೆಯೇ;

ಊ) ರಸ್ತೆ–ಸೇತುವೆ ಬದಲಾಗಿ ಯಾವ ಕೆಲಸಕ್ಕೆ ಹಣ ನೀಡಲು ನಬಾರ್ಡ್ ಮುಂದಾಗಿದೆ (ವಿವರ ನೀಡುವುದು)

ಋ) ಆರ್.ಐ.ಡಿ.ಎಫ್. ಮತ್ತು ಎ.ಐ.ಸಿ.ಎಫ್ ಹಾಗೂ ಕೇಶಿಫ್ ಇವುಗಳ ಉದ್ದೇಶವೇನು?

ೠ) ಗುಣಮಟ್ಟದ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಮಾಡಿಮುಗಿಸಲು ನೂತನ ಯೋಜನೆಗಳನ್ನು ಸರ್ಕಾರ ರೂಪಿಸುವುದೇ;

ಎ) ಹಾಗಿದ್ದಲ್ಲಿ ಅವುಗಳು ಯಾವುವು?

ಶ್ರೀ ಹೆಚ್.ಡಿ ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ನಬಾರ್ಡ್ ಯೋಜನೆಯಡಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ನಬಾರ್ಡ್ ಸಂಸ್ಥೆಯಿಂದ ಸಾಲ ಪಡೆಯಲಾಗುತ್ತಿದೆ. ಆರ್.ಐ.ಡಿ.ಎಫ್–2 ರಿಂದ 9 ರವರೆಗಿನ ಯೋಜನೆಗಳಲ್ಲಿ ಜಿಲ್ಲಾವಾರು ಅನುಮೋದನೆಯಾಗಿರುವ ಕಾಮಗಾರಿಗಳ ಮೊತ್ತವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಆರ್.ಐ.ಡಿ.ಎಫ್–9ರ ಯೋಜನೆಯಡಿ (2003–04) ಸರ್ಕಾರವು 366.00 ಕೋಟಿ ರೂ. ಮೊತ್ತದ 588 ಕಾಮಗಾರಿಗಳನ್ನು ಗುರುತಿಸಿದ್ದು, ಈ ಪೈಕಿ ನಬಾಡ್ ಸಂಸ್ಥೆಯು 2004ರ ಮಾರ್ಚ್ ಅಂತ್ಯದವರೆಗೆ 160.00 ಕೋಟಿ ರೂ. ಮೊತ್ತದ 240 ಕಾಮಗಾರಿಗಳಿಗೆ ಅನುಮೋದನೆ ನೀಡಿರುತ್ತದೆ.

ಇ) ಸಂಬಂಧಪಟ್ಟ ಶಾಸಕರ ಕೋರಿಕೆಯಂತೆ ಕೆಲವು ಪ್ರಸ್ತಾವನೆಗಳನ್ನು ಬದಲಾವಣೆ ಮಾಡಲಾಗಿದೆ.

ಈ) ಕೆಲವು ಕಾಮಗಾರಿಗಳು ಇತರೆ ಯೋಜನೆಯಲ್ಲಿ ಸೇರಿದ್ದಲ್ಲಿ, ಅಂತಹ ಕಾಮಗಾರಿಗಳ ಪ್ರಸ್ತಾವನೆಗಳಿಗೆ ಬದಲಾವಣೆ ಮಾಡಲಾಗಿರುತ್ತದೆ.

ಉ) ಇಲ್ಲ.

ಊ) ರಸ್ತೆ–ಸೇತುವೆಗಳು ಒಳಗೊಂಡಂತೆ ಸಣ್ಣ ನೀರಾವರಿ, ಕೃಷಿ ಮಾರುಕಟ್ಟೆ ಅಭಿವೃದ್ಧಿಗೆ ಸಾಲ ನೀಡಲು ನಬಾರ್ಡ್ ಒಪ್ಪಿರುತ್ತದೆ.

ಋ) ಆರ್.ಐ.ಡಿ.ಎಫ್ ಯೋಜನೆಯಡಿ ಲೋಕೋಪಯೋಗಿ ಇಲಾಖೆಯ ಗ್ರಾಮೀಣ ಪ್ರದೇಶದಲ್ಲಿ ಸರ್ವ ಋತು ರಸ್ತೆಗಳ ನಿರ್ಮಾಣ ಮತ್ತು ಸೇತುವೆಗಳ ನಿರ್ಮಾಣಕ್ಕೆ ನಬಾರ್ಡ್‌ನಿಂದ ಸಾಲ ಪಡೆಯುತ್ತಿದೆ.

ಎ.ಐ.ಸಿ.ಎಫ್ ಯೋಜನೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಕೇಶಿಪ್ ಯೋಜನೆಯಡಿ ರಾಜ್ಯದ ಪ್ರಮುಖ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಋ) ರಸ್ತೆ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಯಂತ್ರೋಪಕರಣಗಳನ್ನು ಉಪಯೋಗಿಸಲಾಗುತ್ತಿದೆ.

ಎ) ಡಾಂಬರೀಕರಣವನ್ನು ಹಾಟ್ ಮಿಕ್ಸ್ ಪ್ಲಾಂಟ್ ಮತ್ತು ಪೇವರ್‌ಗಳ ಮೂಲಕ ಮಾಡಲಾಗುತ್ತಿದೆ.

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 314ರ ಅನುಬಂಧ

ಲಕ್ಷ ರೂ.ಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆ	ಆರ್.ಐ.ಡಿ.ಎಫ್ 2 ರಿಂದ 9 ರವರೆಗೆ ಮಂಜೂರಾದ ಕಾಮಗಾರಿಗಳು	
		ಸಂಖ್ಯೆ	ಅಂದಾಜು ಮೊತ್ತ
1.	ಬೆಂಗಳೂರು	138	5054.70
2.	ಕೋಲಾರ	186	7051.20
3.	ತುಮಕೂರು	148	6175.50
4.	ಮೈಸೂರು	83	4502.80
5.	ಚಾಮರಾಜನಗರ	36	1778.00
6.	ಮಂಡ್ಯ	125	5629.00
7.	ದಾವಣಗೆರೆ	71	4490.30
8.	ಚಿತ್ರದುರ್ಗ	66	4113.00
9.	ಶಿವಮೊಗ್ಗ	82	3975.00
10.	ಹಾಸನ	97	5057.70
11.	ಚಿಕ್ಕಮಗಳೂರು	101	4081.00

1	2	3	4
12.	ದಕ್ಷಿಣ ಕನ್ನಡ	86	3086.10
13.	ಉಡುಪಿ	59	2914.30
14.	ಕೊಡಗು	54	1632.90
15.	ಧಾರವಾಡ	29	2763.90
16.	ಹಾವೇರಿ	66	3815.30
17.	ಉತ್ತರ ಕನ್ನಡ	71	4345.00
18.	ಗದಗ	44	3592.60
19.	ಬೆಳಗಾವಿ	156	8650.30
20.	ಬಿಜಾಪುರ	60	4701.50
21.	ಬಾಗಲಕೋಟೆ	67	3699.00
22.	ಬೀದರ್	52	2808.20
23.	ಗುಲ್ಬರ್ಗ	153	10109.30
24.	ರಾಯಚೂರು	53	4066.40
25.	ಕೊಪ್ಪಳ	39	2775.40
26.	ಬಳ್ಳಾರಿ	44	3076.60
	ಒಟ್ಟು	**2166**	**113,945.00**

....

132 (151) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿರುವ ರಸ್ತೆಗಳ ಡಾಂಬರೀಕರಣಕ್ಕಾಗಿ 2002–03, 2003–04ನೇ ಸಾಲಿನಲ್ಲಿ ಒದಗಿಸಲಾದ ಹಣ ಎಷ್ಟು?

ಆ) ಅಭಿವೃದ್ಧಿಗೊಳಿಸಿದ ರಸ್ತೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಸ್ತೆಗಳ ಡಾಂಬರೀಕರಣಕ್ಕಾಗಿ ಒದಗಿಸಲಾದ ಅನುದಾನ ವಿವರ ಈ ಕೆಳಕಂಡಂತಿದೆ :–

2002–03 (ಲಕ್ಷ ರೂ.ಗಳಲ್ಲಿ)

ಜಿಲ್ಲೆ	3054	ನಬಾರ್ಡ್	ಸಿಆರ್ಎಫ್	ಒಟ್ಟು
ದಕ್ಷಿಣ ಕನ್ನಡ	192.60	152.00	113.00	457.60
ಉಡುಪಿ	126.40	76.00	192.20	394.60
ಒಟ್ಟು	**319.00**	**228.00**	**305.20**	**852.20**